5. ಬಿಜಾಪುರ ನವರಸಪುರದಲ್ಲಿ ಪ್ರತೀವರ್ಷ ಜಿಲ್ಲಾ ಆಡಳಿತದ ಸಹಕಾರದೊಡನೆ ಪ್ರವಾಸಿ ಉತ್ಸವಗಳನ್ನು ಆಚರಿಸಲಾಗುತ್ತಿದೆ.

6. ಸುಲಭ ಶೌಚಾಲಯವನ್ನು ನಿರ್ಮಿಸಿನಿರ್ವಹಣೆಗಾಗಿ ಸುಲಭ ಇಂಟರ್ ನ್ಯಾಷನಲ್ ರವರಿಗೆ ವಹಿಸಿಲಾಗಿದೆ.

7. ನಿರುದ್ಯೋಗಿ ಪದವಿಧರರಿಗೆ ತರಬೇತಿ ನೀಡಿ ಪ್ರವಾಸಿ ಮಾರ್ಗದರ್ಶಿಗಳಾಗಿ ಕೆಲಸ ನಿರ್ವಹಿಸಲು ಪರವಾನಗಿ ನೀಡಲಾಗಿದೆ.

8. ರಾಜ್ಯದ ಯೋಜನೆಯಡಿಯಲ್ಲಿ ರೂ. 11.00 ಲಕ್ಷ ವೆಚ್ಚದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದೆ.

9. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ಹೋಟೆಲ್ ಮಯೂರ ಆದಿಲ್‌ಶಾಹಿಯನ್ನು ನಿರ್ವಹಿಸಲಾಗುತ್ತದೆ.

2) ಕಳೆದ 3 ವರ್ಷಗಳಿಂದೀಚೆಗೆ ಬಿಜಾಪುರ ನಗರಕ್ಕೆ ಭೇಟಿ ಕೊಟ್ಟ ವಿದೇಶಿಯರ ಸಂಖ್ಯೆ ಎಷ್ಟು? (ವರ್ಷವಾರು) ವಿವರ ನೀಡುವುದು?:- 1992-93ರಲ್ಲಿ 1,746-00
1993-94ರಲ್ಲಿ 1,461-00
1994-95ರಲ್ಲಿ 8,401-00

3) ವಿದೇಶಿ ಪ್ರವಾಸಿಗರವನ್ನು ರಾಜ್ಯಕ್ಕೆ ಆಕರ್ಷಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು:- ರಾಜ್ಯಕ್ಕೆ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಯದ ನೆರವಿನಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ಪ್ರವಾಸೋದ್ಯಮದ ಬಗ್ಗೆ ಹೊರತರಲಾಗಿರುವ ಪ್ರವಾಸಿ ಮಾಹಿತಿ ಮಡಿಕೆಗಳನ್ನು ವಿತರಿಸುವುದು, ವಿಡಿಯೋ ಚಿತ್ರಗಳನ್ನು ಪ್ರದರ್ಶಿಸುವ ಮೂಲಕ ಹಾಗೂ ಪ್ರವಾಸಿ ವಸ್ತು ಪ್ರದರ್ಶನ ಮೇಳಗಳಲ್ಲಿ ಭಾಗವಹಿಸುವ ಮೂಲಕ ಆಕರ್ಷಿಸಲಾಗುವುದು. ಅಲ್ಲದೆ ರಾಜ್ಯದಲ್ಲಿ ಪ್ರವಾಸಿ ಉತ್ಸವಗಳನ್ನು ಆಚರಿಸುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲಾಗುವುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್

ವಿಷಯ:- ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:- 57 (219)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ)

ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ರಾಜ್ಯದಲ್ಲಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು?:- 1991ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಸಂಘಟಿತ ಕಾರ್ಮಿಕರ ಸಂಖ್ಯೆ 6,12,961 ಹಾಗೂ ಅಸಂಘಟಿತ ಕಾರ್ಮಿಕರ ಸಂಖ್ಯೆ 3,90,61,392 ಇರುತ್ತದೆ.

2. ಅಸಂಘಟಿತ ಕಾರ್ಮಿಕರಿಗೆ ಕೊಡುತ್ತಿರುವ ಮತ್ತು ಕೊಡಬೇಕೆಂದಿರುವ ಸೌಲಭ್ಯಗಳುಯಾವುವು?:- ಸರ್ಕಾರದ ಅನೇಕ ಉದ್ಯಮಗಳನ್ನು ಕನಿಷ್ಠ ವೇತನ ಕಾಯ್ದೆಯ ಅನುಸೂಚಿಯಲ್ಲಿ ಸೇರಿಸಿ ಕನಿಷ್ಠ ವೇತನವನ್ನು ನಿಗಧಿಪಡಿತ್ತಿದೆ.

ಹಾಗೂ ಕನಿಷ್ಠ ವೇತನ ಕಾಯ್ದೆಯ ಅನ್ವಯ ಇದನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಇದಲ್ಲದೆ ಬೇರೆ ಯಾವುದೇ ಸೌಲಭ್ಯಗಳನ್ನು ಕೊಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಸಿದ್ದರಾಮಯ್ಯ
(ಉಪಮುಖ್ಯಮಂತ್ರಿ)

ವಿಷಯ:- ಶರಾವತಿ ಸೇತುವೆಯ ಮೇಲೆ ಖಾಸಗೀ ಬಸ್‌ಗಳ ಓಡಾಟದ ನಿರ್ಭಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 58 (339)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ)

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶರಾವತಿ ಸೇತುವೆಯಲ್ಲಿ ಸರ್ಕಾರಿ ಬಸ್ಸುಗಳನ್ನು ಓಡಿಸಲು ಅನುಮತಿ ನೀಡುತ್ತಿದ್ದು, ಮಂಗಳೂರಿನಿಂದ ಬೊಂಬಾಯಿಗೆ ಹೋಗುವ ಖಾಸಗಿ ಬಸ್ಸುಗಳನ್ನು ಸೇತುವೆ ಮೇಲೆ ಸಂಚರಿಸಲು ಬಿಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?:- ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸರ್ಕಾರಿ ಬಸ್ಸುಗಳಿಗೆ ಒಂದು ನೀತಿ ಮತ್ತು ಖಾಸಗಿ ಬಸ್ಸುಗಳಿಗೆ ಅನುಸರಿಸುವ ಒಂದು ನೀತಿ ಸರಿಯೇ?:- ಸದರಿ ಸೇತುವೆ ಮೇಲೆ 6 ಮೆಟ್ರಿಕ್ ಟನ್‌ಗಳ ಭಾರಕ್ಕಿಂತ ಕಮ್ಮಿ ಇರುವ ವಾಹನಗಳನ್ನು ಬಿಡಬಹುದಾಗಿದೆ. ಖಾಸಗಿ ಬಸ್ಸುಗಳ ತೂಕವು 9 ಟನ್ನುಗಳನ್ನು ಮೀರುವುದರಿಂದ ಅವುಗಳನ್ನು ಸೇತುವೆ ಮೇಲೆ ಸಂಚಾರ ನಿಷೇಧಿಸಿದೆ.

ಇ) ಬೆಂಗಳೂರಿನಿಂದ ಬೊಂಬಾಯಿಗೆ ಹೋಗುವ ಖಾಸಗಿ ಬಸ್ಸುಗಳು ಬಾರ್ಜ್‌ಗಾಗಿ 4 ಗಂಟೆಗಳ ಕಾಲ ಕಾಯಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?:- ನದಿಯ ನೀರಿನ ಮಟ್ಟ ಲೋ ಟೈಡ್ ಮಟ್ಟದಲ್ಲಿದ್ದಾಗ ಬಾರ್ಜ್‌ಗಳ ಓಡಾಟ ಸಾಧ್ಯವಿರುವುದಿಲ್ಲ. ಈ ನೀರಿನ ಮಟ್ಟ ಬಾರ್ಜ್‌ಗಳ ಓಡಾಟಕ್ಕೆ ಅನುಕೂಲವಾಗುವ ಮಟ್ಟ ತಲುಪವವರೆಗೆ ಎಲ್ಲಾ ವಾಹನಗಳು ಕಾಯಬೇಕಾಗುತ್ತದೆ.

ಈ) ಈ ತಾರತಮ್ಯಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುವುದೇ?:- ತಾರತಮ್ಯವಿರುವುದಿಲ್ಲ.

ವಿಷಯ:- ಕುಂದಾಪುರ ಕ್ರೀಡಾಂಗಣ ನಿರ್ಮಾಣದ ಬಗ್ಗೆ ಅಂದಾಜು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 59 (218)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ)

ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕುಂದಾಪುರ ಕ್ರೀಡಾಂಗಣ ನಿರ್ಮಾಣಕ್ಕೆ ಆಗುವ ಅಂದಾಜು ವೆಚ್ಚವೆಷ್ಟು?:- ರೂ. 25.80 ಲಕ್ಷಗಳು

ಆ) ಈಗಾಗಲೇ ಕ್ರೀಡಾಂಗಣಕ್ಕೆ ಖರ್ಚು ಮಾಡಿರುವ ಹಣವೆಷ್ಟು? ಹಾಗೂ ಪ್ರಗತಿ